- ಕಲಿಕಾ ಅಭಿವೃದ್ಧಿಗೆ ವಿಶೇಷ ತರಬೇತಿ.
- ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣೆಗೆ ತರಬೇತಿ.

ಆದರೆ, ಆರ್.ಎಂ.ಎಸ್.ಎ. ಒಂದು ಭಾಗ ಸಿವಿಲ್ ಕಾಮಗಾರಿಗಳ ನಿರ್ಮಾಣ ಅಲ್ಪಮಟ್ಟಿಗೆ ನಿಧಾನವಾಗಿದ್ದು, ಶೀಘ್ರ ಪೂರ್ಣಗೊಳಿಸಲು ತಿಳಿಸಲಾಗಿದೆ.

ಇ) ಒಟ್ಟು 59955 ಕೊಠಡಿಗಳು ಹೆಂಚಿನ ಮೇಲ್ಛಾವಣಿ ಹೊಂದಿವೆ. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರುಗಳಿಗೆ ಅಸುರಕ್ಷಿತವೆನ್ನಿಸಿದ್ದಲ್ಲಿ ಮಾತ್ರ ಕ್ರಮವಾಹಿಸಲು ಯೋಜನೆ ರೂಪಿಸಲಾಗುತ್ತಿದೆ ಹಾಗೂ ರಾಜ್ಯ ವಲಯದಡಿ ಅನುದಾನದ ಅನುದಾನ ಲಭ್ಯತೆ ಆಧರಿಸಿ ಆದ್ಯತೆ ಅನುಸಾರ ಕ್ರಮವಾಹಿಸಲಗುತ್ತಿದೆ.

ಜಾನಪದ ವಿಶ್ವವಿದ್ಯಾಲಯದ ಅಭಿವೃದ್ಧಿ

2544(3214); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವಿ)

ಅ) ಜಾನಪದ ವಿಶ್ವವಿದ್ಯಾಲಯ ಸ್ಥಾಪನೆ ಆದ ಮೇಲೆ ವಿವಿಧ ಪುಸ್ತಳಿಗಳನ್ನು ಅನುಮೋದಿಸಿದೆಯೇ; ಅನುಮೋದಿಸಿದ್ದಲ್ಲಿ ಕಾರಣಗಳೇನು;

ಆ) ಕಳೆದ ಮೂರು ವರ್ಷಗಳ ಹಿಂದೆ ಜಾನಪದ ವಿಶ್ವವಿದ್ಯಾಲಯಕ್ಕೆ ಸರ್ಕಾರ ನಿಗದಿಪಡಿಸಿದ ಹಾಗೂ ಬಿಡುಗಡೆ ಮಾಡಿದ ಅನುದಾನ ಎಷ್ಟು;

ಇ) ಪ್ರಸ್ತುತ ವರ್ಷ ಜಾನಪದ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳೇನು; ಅದಕ್ಕಾಗಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ನಿಗದಿಪಡಿಸಿದೆ?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಇಲ್ಲ.

ಆ) ಕಳೆದ ಮೂರು ವರ್ಷಗಳ ಹಿಂದೆ ಜಾನಪದ ವಿಶ್ವವಿದ್ಯಾಲಯಕ್ಕೆ ₹ 20.37 ಕೋಟಿಗಳನ್ನು ವಿವಿಧ ಕಾಮಗಾರಿಗಳಿಗೆ ಮಂಜೂರು ಮಾಡಲು ಆಯವ್ಯಯದಲ್ಲಿ ಹಂಚಿಕೆಯಾಗಿದ್ದು, 2011–12ನೇ ಸಾಲಿನಲ್ಲಿ ₹ 2.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಜಾನಪದ ವಿಶ್ವವಿದ್ಯಾಲಯಕ್ಕೆ ₹ 5.00 ಕೋಟಿ ಅನುದಾನ ಕಲ್ಪಿಸಲಾಗಿದೆ.

ವಸತಿ ಇಲಾಖೆಯಿಂದ ಮಂಜೂರಾಗಿರುವ ಮನೆಗಳು

2545(3320); ಶ್ರೀ ಭರಮಗೌಡ (ರಾಜು) ಹಾಲಗೌಡ ಕಾಗೆ (ಕಾಗವಾಡ)

ಅ) ಕಳೆದ 3 ವರ್ಷಗಳಲ್ಲಿ ಕಾಗವಾಡ ಕ್ಷೇತ್ರಕ್ಕೆ ಯಾವ ಯಾವ ಯೋಜನೆಗಳಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ. (ಯೋಜನಾವಾರು ಫಲಾನುಭವಿಗಳ ಹೆಸರು ಮತ್ತು ವಿಳಾಸದ ಸಂಪೂರ್ಣ ವಿವರ ನೀಡುವುದು)

ಶ್ರೀ ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಕಾಗವಾಡ ಕ್ಷೇತ್ರಕ್ಕೆ ವಿವಿಧ ವಸತಿ ಯೋಜನೆಗಳಲ್ಲಿ 3038 ಮನೆಗಳು ಮಂಜೂರಾಗಿದ್ದು, ವಿವರಗಳು ಕೆಳಗಿನಂತಿವೆ:

ಯೋಜನೆ	ಮಂಜೂರಾದ ಮನೆಗಳು	ಅನುಬಂಧ
ಬಸವ ವಸತಿ ಯೋಜನೆ	380	1
ಇಂದಿರಾ ಆವಾಸ್	2658	2
ಒಟ್ಟು	**3038**	

ಯೋಜನಾವಾರು ಫಲಾನುಭವಿಗಳ ಹೆಸರು ಮತ್ತು ವಿವರಗಳು ಅನುಬಂಧದಲ್ಲಿದೆ.